**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಘ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಐ /145, 1ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.

ಸಂ: ಕೆಎಸ್‌ಆರ್‌ಎಲ್‌ಪಿಎಸ್/107/ಎಸ್‌ಪಿಎಂ/2013-14 – ಭಾಗ-3 ದಿನಾಂಕ:26.12.2013

# ಅಧಿಕೃತ ಜ್ಞಾಪನ

**ವಿಷಯ:** ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಹಾಗೂ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**

1. ಸರ್ಕಾರದ ಆದೇಶ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/107/ಎಸ್‌ಪಿಎಂ/2013, ಬೆಂಗಳೂರು ದಿನಾಂಕ: 21.11.2013.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು. ರವರ ಪ್ರಸ್ತಾವನೆ ಸಂಖ್ಯೆ: ರಾಗ್ರಾಸಂ:ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್/2013-14, ದಿನಾಂಕ: 10.12.2013.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/ಎಸ್‌ಜೆವೈ/2013 ಬೆಂಗಳೂರು ದಿನಾಂಕ: 19.11.2013
4. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 334 ವೆಚ್ಚ-6/2013, ದಿನಾಂಕ: 12.11.2013.

****

**ಪ್ರಸ್ತಾವನೆ:**

2013-14ನೇ ಸಾಲಿನಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ 2 ಲಕ್ಷ ಗ್ರಾಮೀಣ ಯುವ ಜನತೆಗೆ ಸ್ವ-ಉದ್ಯೋಗ/ ವೃತ್ತಿ ಪರ ಕೌಶಲ್ಯ ಉದ್ಯೋಗ ಒದಗಿಸಲು ಉದ್ದೇಶಿಸಲಾಗಿದೆ. ಅದರಂತೆ ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದೆ. ರಾಜ್ಯದಲ್ಲಿರುವ ಪ್ರತಿ ಗ್ರಾಮ ಪಂಚಾಯತ್‌ನಿಂದ 40 ಯುವ ಜನತೆಯನ್ನು ಗ್ರಾಮ ಸಭೆಗಳ ಮೂಲಕ ಸರ್ಕಾರದ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಯುವಜನತೆಗೆ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಸಂಸ್ಥೆಯ ಸಹಯೋಗದೊಂದಿಗೆ ಸ್ಯಾಟ್‌ಕಾಂ (ಉಪಗ್ರಹ ಆಧಾರಿತ) ತರಬೇತಿಯನ್ನು ಸ್ವ-ಉದ್ಯೋಗ /ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕೈಗೊಳ್ಳಬಯಸುವ ಫಲಾನುಭವಿಗಳಿಗೆ ಮಾರ್ಗದರ್ಶನ ಶಿಬಿರ ಏರ್ಪಡಿಸಲು ಯೋಜಿಸಲಾಗಿದೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಗ್ರಾಮೀಣ ಯುವ ಜನರಿಗೆ ಸ್ವ-ಉದ್ಯೋಗ/ ವೃತ್ತಿ ಕೌಶಲ್ಯ ಉದ್ಯೋಗ ಕಲ್ಪಿಸುವ ಕಾರ್ಯಕ್ರಮಕ್ಕೆ ಅಗತ್ಯವಿರುವ ಅನುದಾನ ರೂ. 105 ಕೋಟಿಗಳನ್ನು ಪೂರಕ ಅಂದಾಜು-1ರಲ್ಲಿ ಒದಗಿಸಲು ಉಲ್ಲೇಖ-4ರಲ್ಲಿ ಆರ್ಥಿಕ ಇಲಾಖೆ ಸಹಮತಿಸಿದೆ. ಅನುದಾನದ ಬಿಡುಗಡೆಯನ್ನು ನಿರೀಕ್ಷಿಸಿದೆ.

ಸ್ಯಾಟ್‌ಕಾಂ ಕಾರ್ಯಕ್ರಮಕ್ಕೆ ತಗಲುವ ಅಂದಾಜು ಒಟ್ಟು ವೆಚ್ಚ ರೂ. 5,69,48,325/- ಗಳನ್ನು ಉಲ್ಲೇಖ (2)ರಲ್ಲಿ ನಿರ್ದೇಶಕರು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರು ಸಲ್ಲಿಸಿದ್ದು, ಇವುಗಳಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರಿಗೆ ರೂ. 39,12,375/- (Reading material, soft copy of power point presentation and films DVD making cost ರೂ. 11,36,250/-, Training of trainers ರೂ. 4,77,000/-, Satcom Studio expenses ರೂ. 22,99,125/- ). ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಅಭ್ಯರ್ಥಿಗಳಿಗಾಗಿ ತರಬೇತಿಗೆ ತಗಲುವ ವೆಚ್ಚ ರೂ. 5,30,35,950/- ಗಳಾಗಿರುತ್ತದೆ.

ಪ್ರಸ್ತುತ ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು 2013-14ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಕಾಲಾವಕಾಶ ಕಡಿಮೆ ಇರುತ್ತದೆ. ಗ್ರಾಮ ಸಭೆಗಳ ಮೂಲಕ ಆಯ್ಕೆಗೊಂಡ ಯುವಜನತೆಗೆ ಸ್ಯಾಟ್‌ಕಾಂ ಮೂಲಕ ತರಬೇತಿ ನೀಡಬೇಕಾಗಿದ್ದು ಅದಕ್ಕೆ ತಗಲುವ ವೆಚ್ಚವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ ಈ ಯೋಜನೆಯಡಿ ಇನ್ನೂ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ವತಿಯಿಂದ ಸಂಜೀವಿನಿ / ಎನ್‌ಆರ್‌ಎಲ್‌ಎಂ ಯೋಜನೆಯನ್ನು ಅನುಷ್ಠಾನಗೊಳಿಸಲು 2013-14ನೇ

ಸಾಲಿನ ರಾಜ್ಯದ ಪಾಲಿನ ಮೊದಲನೇ ಕಂತಿನ ಅನುದಾನ ಶೇ.25ರ ಅನುದಾನ ರೂ. 725.33 ಲಕ್ಷಗಳು ಉಲ್ಲೇಖ(3)ರನ್ವಯ ಬಿಡುಗಡೆಯಾಗಿರುತ್ತದೆ. ಆದುದರಿಂದ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಅನುದಾನ ಬಿಡುಗಡೆಯನ್ನು ನಿರೀಕ್ಷಿಸಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಹಾಗೂ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಉಲ್ಲೇಖ(3)ರಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮ ಆಯೋಜಿಸಲು ರಾಜೀವ್‌ಗಾಂಧಿ ಚೈತನ್ಯ ಯೋಜನೆಯಡಿ ರಾಜ್ಯ ಸರ್ಕಾರವು ಬಿಡುಗಡೆ ಮಾಡುವ ಅನುದಾನವನ್ನು ಎನ್‌ಆರ್‌ಎಲ್‌ಎಂ ಅನುದಾನಕ್ಕೆ ಮರುಹೊಂದಾಣಿಕೆ ಮಾಡುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜೀವ್ ಗಾಂಧಿ ಚೇತನ್ಯ ಯೋಜನೆಯ ಸ್ಯಾಟ್‌ಕಾಂ (ಉಪಗ್ರಹ ಆಧಾರಿತ) ತರಬೇತಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳಿಗೆ ತಗಲುವ ವೆಚ್ಚ **ರೂ.5,30,35,950/- (ಐದು ಕೋಟಿ ಮುವತ್ತು ಲಕ್ಷ ಮುವತ್ತೈದು ಸಾವಿರದ ಒಂಭೈನೂರ ಐವತ್ತು ರೂಪಾಯಿಗಳು ಮಾತ್ರ)** ಹಾಗೂ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ರವರಿಗೆ **ರೂ.39,12,375/- (ಮುವತ್ತೊಂಬತ್ತು ಲಕ್ಷದ ಹನ್ನೆರಡು ಸಾವಿರದ ಮುನ್ನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ)**ಗಳನ್ನು ಅನುಬಂಧ (1)ರಲ್ಲಿ ತೋರಿಸಿರುವಂತೆ ಒಟ್ಟು **ರೂ.5,69,48,325/- (ರೂಪಾಯಿ ಐದು ಕೋಟಿ ಅರವತ್ತೊಂಬತ್ತು ಲಕ್ಷ ನಲವತ್ತೆಂಟು ಸಾವಿರದ ಮುನ್ನೂರ ಇಪ್ಪತ್ತೈದುಗಳು ಮಾತ್ರ)** ಗಳನ್ನು ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಲ್ಲಿ ಎನ್‌ಆರ್‌ಎಲ್‌ಎಂ ಅನುದಾನದಲ್ಲಿ ಲಭ್ಯವಿರುವ ರಾಜ್ಯದ ಪಾಲಿನ ಮೊತ್ತದಿಂದ ಬಿಡುಗಡೆ ಮಾಡಿ ಆದೇಶಿಸಿದೆ. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅನುಬಂಧ (2)ರ ಮಾರ್ಗಸೂಚಿಯನ್ವಯ ಅನುದಾನವನ್ನು ವೆಚ್ಚ ಮಾಡುವಂತೆ ಆದೇಶಿಸಿದೆ.

ಅಭಿಯಾನ ನಿರ್ದೇಶಕರು
"ಕೆಎಸ್‌ಆರ್‌ಎಲ್‌ಪಿಎಸ್-ಸಂಜೀವಿನಿ"

ಗೆ,

1. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ.
4. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಲೇಡಿ ಕರ್ಜನ್ ರಸ್ತೆ ಶಾಖೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಅಪರ ಅಭಿಯಾನ ನಿರ್ದೇಶಕರು (ಸಂಜೀವಿನಿ) ಇವರ ಆಪ್ತ ಸಹಾಯಕರಿಗೆ, ಬೆಂಗಳೂರು.
5. ಲೆಕ್ಕಪತ್ರ ವಿಭಾಗ, ಅಭಿಯಾನ ನಿರ್ದೇಶಕರ ಕಛೇರಿ (ಸಂಜೀವಿನಿ), ಬೆಂಗಳೂರು – ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ(1)ರಲ್ಲಿ ನಮೂದಿಸಿರುವಂತೆ ಎನ್‌ಆರ್‌ಎಲ್‌ಎಂ ಶೀರ್ಷಿಕೆಗೆ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ಅನುದಾನದಿಂದ ಆರ್‌ಟಿಜಿಎಸ್ ಮೂಲಕ ಬಿಡುಗಡೆ ಮಾಡಲು ಕ್ರಮವಹಿಸುವುದು. ಈ ಮೊತ್ತವನ್ನು "ರಾಜೀವ್ ಗಾಂಧಿ ಚೈತನ್ಯ" ಯೋಜನೆಗೆ ಬಿಡುಗಡೆಯಾಗುವ ಅನುದಾನದಿಂದ ಮರುಹೊಂದಾಣಿಕೆ ಮಾಡಿಕೊಳ್ಳುವುದು.
6. ಕಛೇರಿ ಪ್ರತಿ.

## ಅನುಬಂಧ – 1

**ಅಧಿಕೃತ ಜ್ಞಾಪನ ಸಂ: ಕೆಎಸ್‌ಆರ್‌ಎಲ್‌ಪಿಎಸ್/107/ಎಸ್‌ಪಿಎಂ/2013-14 (ಭಾಗ-3) ದಿನಾಂಕ: 26.12.2013ರ "ರಾಜೀವ್ ಗಾಂಧಿ ಚೈತನ್ಯ" ಯೋಜನೆಯಡಿ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಬಗ್ಗೆ**

| ಕ್ರಮ ಸಂಖ್ಯೆ | ಜಿಲ್ಲೆ | ಬಿಡುಗಡೆ ಮಾಡುತ್ತಿರುವ ಅನುದಾನ ರೂ. |
|---|---|---|
| 1 | ಮೈಸೂರು | 2232175 |
| 2 | ಚಾಮರಾಜನಗರ | 1133925 |
| 3 | ಬೆಂಗಳೂರು (ಗ್ರಾ) | 939250 |
| 4 | ರಾಮನಗರ | 1231450 |
| 5 | ಬೆಂಗಳೂರು (ನಗರ) | 824350 |
| 6 | ಕೋಲಾರ | 1489500 |
| 7 | ಚಿಕ್ಕಬಳ್ಳಾಪುರ | 1443625 |
| 8 | ಹಾಸನ | 2433100 |
| 9 | ತುಮಕೂರು | 3054525 |
| 10 | ಕೊಡಗು | 928375 |
| 11 | ಬಳ್ಳಾರಿ | 1802375 |
| 12 | ಶಿವಮೊಗ್ಗ | 2453800 |
| 13 | ಚಿಕ್ಕಮಗಳೂರು | 2082100 |
| 14 | ಉತ್ತರ ಕನ್ನಡ | 1984500 |
| 15 | ದಕ್ಷಿಣ ಕನ್ನಡ | 1880950 |
| 16 | ಬೆಳಗಾಂ | 4402950 |
| 17 | ಬಾಗಲಕೋಟೆ | 1542925 |
| 18 | ಧಾರವಾಡ | 1213600 |
| 19 | ಹಾವೇರಿ | 1980750 |
| 20 | ಗದಗ್ | 1016075 |
| 21 | ಬಿಜಾಪುರ | 1856850 |
| 22 | ಬೀದರ್ | 1669650 |
| 23 | ಚಿತ್ರದುರ್ಗ | 1763850 |
| 24 | ದಾವಣಗೆರೆ | 2127275 |
| 25 | ಗುಲ್ಬರ್ಗಾ | 2099200 |
| 26 | ಕೊಪ್ಪಳ | 1278625 |
| 27 | ಮಂಡ್ಯ | 2185700 |
| 28 | ರಾಯಚೂರು | 1569650 |
| 29 | ಉಡುಪಿ | 1315200 |
| 30 | ಯಾದಗಿರಿ | 1099650 |
| | **ಒಟ್ಟು** | **53035950** |
| ಅ. | ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು | **3912375** |
| | **ಎಲ್ಲಾ ಒಟ್ಟು** | **56948325** |

ಅಭಿಯಾನ ನಿರ್ದೇಶಕರು
"ಸಂಜೀವಿನಿ" ಕೆಎಸ್‌ಆರ್‌ಎಲ್‌ಪಿಎಸ್

# ಅನುಬಂಧ-2

## ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿರುವ ಅನುದಾನದ ಬಳಕೆಯ ಮಾರ್ಗಸೂಚಿ

ಸಂ: ಕೆಎಸ್‌ಆರ್‌ಎಲ್‌ಪಿಎಸ್/107/ಎಸ್‌ಪಿಎಂ/2013-14 (ಭಾಗ-3) ದಿನಾಂಕ: 26.12.2013

- ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಗ್ರಾಮ ಸಭೆಗಳ ಮೂಲಕ ಆಯ್ಕೆಯಾದ ಯುವಜನರಿಗೆ ಒಟ್ಟು 30 ಪ್ರಸರಣಗಳಲ್ಲಿ ಉಪಗ್ರಹ ಆಧಾರಿತ ಪ್ರೇರಣಾ ಕಾರ್ಯಕ್ರಮವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೂಲಕ ಏರ್ಪಡಿಸಲಾಗಿದೆ.
- ಬಿಡುಗಡೆ ಮಾಡಿರುವ ಅನುದಾನವನ್ನು ತಕ್ಷಣ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಾರ್ಯಕ್ರಮದ ವೆಚ್ಚಗಳನ್ನು ಬರಿಸಲು ಬಿಡುಗಡೆ ಮಾಡುವುದು.
- ತರಬೇತಿಯನ್ನು ನಿರ್ವಹಿಸಲು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಪ್ರತೀ ತಾಲ್ಲೂಕಿಗೆ ಒಬ್ಬರು ಸಂಪನ್ಮೂಲ ವ್ಯಕ್ತಿಯನ್ನು ನಿಯೋಜಿಸಲಾಗುತ್ತಿದ್ದು, ಸಂಪನ್ಮೂಲ ವ್ಯಕ್ತಿಗಳಿಗೆ ಒಂದು ದಿನಕ್ಕೆ ರೂ.500/-ರಂತೆ ಗೌರವಧನವನ್ನು ಪ್ರತಿ ವಾರ ಪಾವತಿಸುವುದು.
- ಸಂಪನ್ಮೂಲ ವ್ಯಕ್ತಿಗಳ ಪ್ರಯಾಣ ವೆಚ್ಚ ಮತ್ತು ವಾಸ್ತವ್ಯಕ್ಕಾಗಿ (ಸ್ಥಳೀಯರನ್ನು ಹೊರತುಪಡಿಸಿ) ಪ್ರತಿಯೊಬ್ಬರಿಗೆ ಗರಿಷ್ಠ ರೂ.200/-ಗಳನ್ನು ಪಾವತಿಸಬಹುದಾಗಿದೆ. (ರೈಲು/ಬಸ್ಸು ಟಿಕೇಟುಗಳನ್ನ ಕಡ್ಡಾಯವಾಗಿ ಪಡೆಯುವುದು).
- ಶಿಬಿರಾರ್ಥಿಗಳ ಮತ್ತು ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳ ಊಟೋಪಚಾರದ ವೆಚ್ಚಗಳನ್ನು ಭರಿಸಲು ಪ್ರತಿಯೊಬ್ಬರಿಗೆ ದಿನಕ್ಕೆ ರೂ.75/- ರಂತೆ (ಎರಡು ಹೊತ್ತಿನ ಕಾಫಿ/ಟೀ ಮತ್ತು ಬಿಸ್ಕತ್ತು ಮಧ್ಯಾಹ್ನ ಊಟೋಪಚಾರದ ವ್ಯವಸ್ಥೆ ಸೇರಿ) ಹಾಗೂ ತರಬೇತಿ ಕಿಟ್‌ಗಾಗಿ ಪ್ರತಿ ಶಿಬಿರಾರ್ಥಿಗೆ ರೂ.20ರಂತೆ (ಒಂದು ಪೆನ್ ಮತ್ತು ಬರವಣಿಗೆ ಪ್ಯಾಡ್) ನಿಗದಿಪಡಿಸಲಾಗಿದೆ.
- ಶಿಭಿರಾರ್ಥಿಗಳಿಗೆ ಪ್ರಯಾಣ ವೆಚ್ಚ, ಬೆಳಗಿನ ಉಪಹಾರ, ಇತರೆ ಆಕಸ್ಮಿಕ ವೆಚ್ಚಕ್ಕಾಗಿ ಪ್ರತಿಯೊಬ್ಬರಿಗೆ ಗರಿಷ್ಠ ರೂ.100/ ನಿಗದಿಪಡಿಸಲಾಗಿದೆ.ವೆಚ್ಚ ಮಾಡಿರುವುದಕ್ಕೆ ವಹಿ ನಿರ್ವಹಿಸುವುದು.
- ತಾಂತ್ರಿಕ ಬೆಂಬಲಕ್ಕಾಗಿ ತಾಲ್ಲೂಕು ಪಂಚಾಯಿತಿಗೆ ಪ್ರತಿ ದಿನಕ್ಕೆ ರೂ.1,000/-ಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಮೊತ್ತವನ್ನು ತರಬೇತಿಗೆ ಅಗತ್ಯವಿರುವ ಎಲ್‌ಸಿಡಿ ಪ್ರೊಜೆಕ್ಟರ್, ಗಣಕಯಂತ್ರ, ಜಮಖಾನ, ಜನರೇಟರ್ ಬಾಡಿಗೆ, ಹಾಗೂ ಇತರೇ ವೆಚ್ಚಗಳಿಗೆ ಮಾತ್ರ ಭರಿಸುವುದು. ಈ ಸೌಲಭ್ಯಗಳು ಈಗಾಗಲೇ ಲಭ್ಯವಿದ್ದಲ್ಲಿ ಸದರಿ ಮೊತ್ತವನ್ನು ಖರ್ಚುಮಾಡಲು ಅವಕಾಶವಿರುವುದಿಲ್ಲ.
- ಓರ್ವ ವಿಷಯ ನಿರ್ವಾಹಕರು ಮತ್ತು ಡಿ ಗ್ರೂಪ್ ರವರ ಸೇವೆಯನ್ನು ಈ ತರಬೇತಿಯ ಸಹಾಯಕ್ಕೆ ಬಳಸಿಕೊಳ್ಳಬಹುದಾಗಿದೆ. ಬಳಸಿಕೊಂಡಲ್ಲಿ ಪ್ರತಿಯೊಂದು ಕಾರ್ಯಕ್ರಮಕ್ಕೆ ರೂ.75ರಂತೆ (ವಿಷಯ ನಿರ್ವಾಹಕರು ರೂ.50 + ಡಿ ಗ್ರೂಪ್ ರೂ.25) ಪಾವತಿಸಬಹುದಾಗಿದೆ.
- ನಿಯಮಾವಳಿಯಂತೆ ಅವಶ್ಯವಿರುವವೆಚ್ಚಗಳಿಗೆ ದರಪಟ್ಟಿ ಪಡೆದು ಕ್ರಮ ವಹಿಸುವುದು.
- ಈ ತರಬೇತಿ ವೆಚ್ಚಗಳ ಕುರಿತು- ಪ್ರತ್ಯೇಕವಾಗಿ ಲೆಕ್ಕ ನಿರ್ವಹಿಸಿ, ಪ್ರತಿಯೊಂದು ವೆಚ್ಚಗಳಿಗೆ ಸಂಬಂಧಿಸಿದ ವೋಚರ್‌ಗಳನ್ನು ತರಬೇತಿ/ದಿನಾಂಕವಾರು ಜೋಡಿಸಿ. ಕಛೇರಿಯಲ್ಲಿ ಸಂರಕ್ಷಿಸಿಡುವುದು ಹಾಗು ಲೆಕ್ಕ ಪರಿಶೋಧನಾ ಸಮಯದಲ್ಲಿ ಒದಗಿಸುವುದು.
- ತರಬೇತಿ ಮುಗಿದ ನಂತರ ಸಂಪನ್ಮೂಲ ವ್ಯಕ್ತಿಯ ಸಹಕಾರದೊಂದಿಗೆ ಸಂಜೀವಿನಿ ಸಂಸ್ಥೆಯ ಈಮೇಲ್ ಐಡಿ nrlmkarnataka@gmail.com ಇದಕ್ಕೆ ಹಾಜರಾತಿಯನ್ನು ಕಡ್ಡಾಯವಾಗಿ ಕಳುಹಿಸುವುದು.
- ಈ ಕಾರ್ಯಕ್ರಮಕ್ಕೆ ಪ್ರತ್ಯೇಕವಾಗಿ ಹಾಜರಾತಿ ನಿರ್ವಹಿಸಿ ಅದರಲ್ಲಿ ಹಾಜರಾದ ಸಂಪನ್ಮೂಲ ವ್ಯಕ್ತಿಗಳ ಹಾಗೂ ಶಿಬಿರಾರ್ಥಿಗಳ ಸಹಿ ಪಡೆದು ವಹಿ ನಿರ್ವಹಿಸತಕ್ಕದ್ದು.
- ತರಬೇತಿಯ ನಂತರ ಖರ್ಚು ವೆಚ್ಚಗಳ ವಿವರಗಳೊಂದಿಗೆ ಹಣಬಳಕೆ ಪ್ರಮಾಣ ಪತ್ರಗಳನ್ನು ಅಭಿಯಾನ ನಿರ್ದೇಶಕರು. ಕೆಎಸ್ ಆರ್ ಎಲ್ ಪಿ ಎಸ್ ಸಂಸ್ಥೆಗೆ ಸಲ್ಲಿಸಲು ಕ್ರಮವಹಿಸುವುದು.

ಅಭಿಯಾನ ನಿರ್ದೇಶಕರು
"ಸಂಜೀವಿನಿ", ಕೆಎಸ್‌ಆರ್‌ಎಲ್‌ಪಿಎಸ್